Establishment of a General Hospital at Mudigere Town

21. Sri G. PUTTASWAMY (Mudigere).—

Will the Minister for Health be pleased to state :—

(*a*) whether it is not a fact that representations from public requesting for the establishment of a general hospital at Mudigere town have been received by the Government ;

(*b*) if so, the action the Government have taken in the matter ?

Sri H. SIDDAVEERAPPA (Minister for Health).—

(*a*) Yes.

(*b*) Government have already sanctioned the Hospital.

ಶ್ರೀ ಜಿ. ಪುಟ್ಟಸ್ವಾಮಿ.—ಸ್ವಾಮಿ, ಆಸ್ಪತ್ರೆಯು ಎಸ್ಟಾಬ್ಲಿಷ್‌ಮೆಂಟ್ ವಗೈರೆ ಖರ್ಚಾಗ ಬೇಕಾದರೆ ಆಸ್ಪತ್ರೆ ಓಪನ್ ಆದಮೇಲೆ ಖರ್ಚು ಆಗುತ್ತದೆ ಎನ್ನತಕ್ಕಂಥದ್ದು ತಿಳಿದಿದ್ದರೂ ಸಹ ಅಕೌಂಟೆಂಟ್ ಜನರರ್‌ರವರು ಈ ಎಕ್ಸ್‌ಪೆಂಡಿಚರ್ ಬಗ್ಗೆ ಪ್ರಶ್ನೆ ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

† ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಕೇಳಿರುವುದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಹಾಗೇನಾದರೂ ಅವರು ಅಬ್ಜಕ್ಷನ್ ಕೇಳಿದ್ದರೆ ಕಟ್ಟಡ ಪ್ರಾರಂಭ ವಾದಾಗಲೇ ಅದರ ಎಸ್ಟಾಬ್ಲಿಷ್‌ಮೆಂಟ್ ಮತ್ತು ಇತರೇ ಖರ್ಚುಗಳನ್ನು ಮಾಡುವುದಿಲ್ಲ, ಆಸ್ಪತ್ರೆ ಓಪನ್ ಮಾಡಿದ ಮೇಲೆ ಎಸ್ಟಾಬ್ಲಿಷ್‌ಮೆಂಟ್‌ಗೆ ಖರ್ಚು ಮಾಡುತ್ತೇವೆ, ಎಂದು ಅವರಿಗೆ ತಿಳಿಸು ತ್ತೀರಾ ಮತ್ತು ಜಾಗ್ರತೆ ಈ ಆಸ್ಪತ್ರೆ ಕಟ್ಟಡ ಕಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಯಾವುದಾದರೂ ಒಂದು ಆಸ್ಪತ್ರೆ ಸ್ಯಾಂಕ್ಷನ್ ಮಾಡಬೇಕಾದರೆ ಅದರ ಎಸ್ಟಾಬ್ಲಿಷ್‌ಮೆಂಟ್ ಮತ್ತು ಇನ್ನು ಇತರ ಖರ್ಚುಗಳು ಯಾವುದು ಬೇಕೋ ಅದನ್ನೂ ಸೇರಿಸಿ ಜಿ.ಓ. ಹಾಕುತ್ತಾರೆ. ಹಾಗೆ ಈ ಆಸ್ಪತ್ರೆ ಸ್ಯಾಂಕ್ಷನ್ ಆದ ಕಾಲದಲ್ಲಿ ಅದರ ಖರ್ಚೆಷ್ಟು, ರೆಕರಿಂಗ್ ಎಷ್ಟು ನಾನ್ ರೆಕರಿಂಗ್ ಎಷ್ಟು ಇದನ್ನೆರ್ಲಾ ಸೇರಿಸುತ್ತಾರೆ. ಮತ್ತು ಈ ಆಸ್ಪತ್ರೆ ಕಟ್ಟಡದ ವಿಚಾರದಲ್ಲಿ ಮೊನ್ನೇ ತಾನೇ ಇದಕ್ಕೆ ಅಡಿಗಲ್ಲು ಹಾಕಿದ್ದಾರೆ ಎಂದು ಅಥೆಂಟಿಕೇಟೆಡ್ ರಿಪೋರ್ಟ್ ನಮ್ಮ ಮಾನ್ಯ ಸದಸ್ಯರಿಂದ ಕೇಳಿದ್ದೇನೆ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಮಾನ್ಯ ಮಂತ್ರಿಗಳು ಹೇಳಿದರು ಒಂದು ಆಸ್ಪತ್ರೆಯನ್ನು ಕಟ್ಟಬೇಕು ಎಂದರೆ ಅದಕ್ಕೆ ಕೆಲವು ಷರತ್ತುಗಳನ್ನು ಇಟ್ಟುಕೊಂಡು ಮಾಡುತ್ತೇವೆ ಎಂದು. ನಾನು ಹೇಳುವುದು ಏನೆಂದರೆ ಮೂಡಿಗೆರೆ ಮತ್ತು ಇತರ ಮಲೆನಾಡು ಪ್ರದೇಶಗಳಿಗೆ ಈ ಕಂಡೀಷನ್ ಇದೆಯೇ ? ಇದ್ದರೆ ಅದನ್ನು ಲಬರಲೈಸ್ ಮಾಡುತ್ತೀರಾ ? ಮತ್ತು ಮಲೆನಾಡು ಪ್ರದೇಶಕ್ಕೆ ಹೆಚ್ಚು ಆಸ್ಪತ್ರೆಗಳನ್ನು ಕೊಡುವ ನೀತಿಯನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಎಲ್ಲೆಲ್ಲಿ ಆಸ್ಪತ್ರೆಗಳನ್ನು ಕೊಡುವುದಕ್ಕೆ ಸಾಧ್ಯ ಎನ್ನುವುದನ್ನು ಪರಿಶೀಲನೆ ಮಾಡೋಣ.

ಶ್ರೀ ಟಿ. ಎಂ. ಮಂಜುನಾಥ್.—ಸ್ವಾಮಿ, ಈ ಆರೋಗ್ಯಕ್ಕೆ ಸಂಬಂಧಪಟ್ಟಂತೆ 15 ಸಾವಿರ ಪ್ರಜಾನಂಖ್ಯೆ ಇರತಕ್ಕಂಥಾ ಕಡೆ ಅವರ ಆರೋಗ್ಯವನ್ನು ಕಾಪಾಡಿಕೊಳ್ಳುವುದಕ್ಕೆ ವೈದ್ಯಕೀಯ ಸೌಲಭ್ಯಗಳನ್ನು ಕೊಡುತ್ತಿದ್ದಾರೆ ಎಂದು ತಿಳಿದುಬಂದಿದೆ. ಈ ರೀತಿ 15 ಸಾವಿರ ಪ್ರಜಾನಂಖ್ಯೆ ಇರತಕ್ಕಂಥಾ ನಗರಗಳಿಗೆ ಆಸ್ಪತ್ರೆಗಳನ್ನು ನಿರ್ಮಾಣ ಮಾಡುತ್ತಿದ್ದೀರಾ ?

ಶ್ರೀ ಎಚ್. ಸಿದ್ದವೀರಪ್ಪ.—ಮಾಡುತ್ತಾ ಇದ್ದೇವೆ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ಕಾಲ ಮುಗಿಯಿತು.